ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67
ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

ಪ್ರಧಾನ ಜೆ.ಎಂ.ಎಫ್.ಸಿ. ನ್ಯಾಯಾಲಯ, ಸಿಂಧನೂರು.

ಸಿ.ಸಿ. ಸಂಖ್ಯೆಃ 715/2021 CW-1 PW- 1

| | |
|---|---|
| ಹೆಸರು | ದೀಪಾ ಹೂಗಾರ್ |
| ಗಂಡನ ಹೆಸರು | ರಮೇಶಕುಮಾರ ಹೂಗಾರ್ |
| ವಯಸ್ಸು | 27 |
| ಉದ್ಯೋಗ | ಮನೆಕೆಲಸ |
| ವಾಸ ಸ್ಥಳ | ಸಿಂಧನೂರು. |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ 18-02-2022

ಮುಖ್ಯ ವಿಚಾರಣೆಃ ಸ ಸ ಅ ಅವರಿಂದ

ಚಾ.ಸಾ. 2 ನನ್ನ ತಂದೆ, ಚಾ.ಸಾ. 3 ನನ್ನ ತಾಯಿ, ಚಾ.ಸಾ. 4 ನನ್ನ ಸೋದರಮಾವ, ಚಾ.ಸಾ. 5 ನನ್ನ ಅಣ್ಣ, ಚಾ.ಸಾ. 6 ನನ್ನ ಅಕ್ಕ. ಚಾ.ಸಾ. 7 ರಿಂದ 11 ರವರ ಪರಿಚಯ ಇದೆ.

1 ನೇ ಆರೋಪಿ ನನ್ನ ಗಂಡ. 2 ನೇ ಆರೋಪಿ ನನ್ನ ಮಾವ. 2 ನೇ ಆರೊಪಿ ಇತ್ತೀಚೆಗೆ ಮರಣ ಹೊಂದಿರುತ್ತಾರೆ. 3 ನೇ ಆರೋಪಿ ನನ್ನ ಅತ್ತೆ. 4 ನೇ ಆರೋಪಿ ನನ್ನ ನಾದುನಿ.

ನನ್ನ ಮತ್ತು 1 ನೇ ಆರೋಪಿಯ ಮದುವೆ ಫೆಬ್ರುವರಿ 15, 2019 ರಂದು ಮಾನ್ವಿ ನಗರದ ಧ್ಯಾನ ಮಂದಿರ ಕಲ್ಯಾಣ ಮಂಟಪದಲ್ಲಿ ಆಗಿರುತ್ತದೆ. ನನ್ನ ಗಂಡನ ಊರು ಮಾನ್ವಿ. ನನ್ನ ತವರೂರು ಸಿಂಧನೂರು. ಮದುವೆಯಾದ ನಂತರ ಗಂಡನ ಮನೆಗೆ ಹೋಗಿರುತ್ತೇನೆ. ಮದುವೆಯ ಸಮಯದಲ್ಲಿ 10 ತೊಲೆ ಬಂಗಾರ, 2 ಲಕ್ಷ ನಗದು ಹಣ, 1 ಕೆ.ಜಿ. ಬೆಳ್ಳಿ ಮತ್ತು ಮನೆಬಳಕೆಯ ಸಾಮಾನುಗಳನ್ನು ನಮ್ಮ ಮನೆಯವರು ಆರೋಪಿತರಿಗೆ ಕೊಟ್ಟಿರುತ್ತಾರೆ. ಆರೋಪಿತರು ನನ್ನನ್ನು ಒಂದು ತಿಂಗಳವರೆಗೆ ಚೆನ್ನಾಗಿ ನೋಡಿಕೊಂಡಿರುತ್ತಾರೆ. ನಂತರ ನನ್ನ ಅತ್ತೆ ನನ್ನ ಕೈ ರೇಖೆಗಳನ್ನು ನೋಡಿ ನಿನಗೆ ಮಕ್ಕಳು ಆಗುವುದಿಲ್ಲ ಅಂತಾ ಹೇಳುತ್ತಿದ್ದರು, ನಾನು ಅಲ್ಪಾವಿಶಿ ಇರುತ್ತೀ ಅಂತಾ ಹೇಳುತ್ತಿದ್ದರು. ಆರೋಪಿ

ನಂ. 3 ನನ್ನ ಅತ್ತೆ ಎದ್ದ ತಕ್ಷಣ ನಿನ್ನ ಮುಖ ನೋಡಬಾರದು ಅಂತಾ ಬೈಯುತ್ತಿದ್ದರು. ನಮ್ಮ ಮನೆ ಬಹಳ ದೊಡ್ಡದು ಇತ್ತು, ಕೆಲಸ ಬೇಗ ಆಗುತ್ತಿರಲಿಲ್ಲ, ಅದಕ್ಕೆ ನನ್ನ ಅತ್ತೆ ಕೆಲಸ 5 ನಿಮಿಷದಲ್ಲಿ ಮುಗಿಸಬೇಕು ಅಂತಾ ಬೈಯುವುದು ಹೊಡೆಯುವುದು ಮಾಡುತ್ತಿದ್ದರು. ನಾನು ಅಡುಗೆ ಮಾಡಿದರೆ ನಿನ್ನ ಕೈಯಲ್ಲಿ ಅಡುಗೆ ತಿನ್ನಬಾರದು ಹೊಲಸು ತಿಂದ ಹಾಗೆ ಆಗುತ್ತದೆ, ದರಿದ್ರ ಇರುತ್ತೀ ಅಂತಾ ಬೈಯುತ್ತಿದ್ದರು. ಶಿವರಾತ್ರಿ ಹಬ್ಬದ ದಿನ ದೇವಸ್ಥಾನಕ್ಕೆ ಕರೆದುಕೊಂಡು ಹೋಗು ಅಂತಾ ಹೇಳಿದ್ದಕ್ಕೆ ನನ್ನ ಗಂಡ ಎಲ್ಲಿಯೂ ಕರೆದುಕೊಂಡು ಹೋಗುವುದಿಲ್ಲ, ನಾವು ಹೇಳಿದ ಹಾಗೆ ಕೇಳಿಕೊಂಡು ಮನೆಯಲ್ಲಿ ಬಿದ್ದಿರಬೇಕು ಅಂತಾ ಹೇಳುತ್ತಿದ್ದ. ಆರೋಪಿತರು ನನ್ನನ್ನು ಎಲ್ಲಿಯೂ ಹೊರಗಡೆ ಬಿಡುತ್ತಿರಲಿಲ್ಲ, ದೇವಸ್ಥಾನಕ್ಕೂ ಸಹ ಬಿಡುತ್ತಿರಲಿಲ್ಲ. ಹೊರಗಡೆ ಹೋದರೆ ಹುಡುಗರು ನೋಡುತ್ತಾರೆ ಅಂತಾ ಬೈಯುತ್ತಿದ್ದರು. ನನಗೆ ಮನೆಯಲ್ಲಿ ಟಿ.ವಿ. ನೋಡಲು ಸಹ ಬಿಡುತ್ತಿರಲಿಲ್ಲ, ರಿಮೋಟ್ ಬಚ್ಚಿಡುತ್ತಿದ್ದರು. ನನ್ನನ್ನು ಗಂಡನ ಜೊತೆ ಮಾತನಾಡಲು ಬಿಡುತ್ತಿರಲಿಲ್ಲ. ಬಹಳ ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು. ಬೇವರ್ಸಿ ಮುಂಡೆ ಅಂತಾ ಬೈಯುತ್ತಿದ್ದರು.

ನನ್ನ ಮಾವ ನನ್ನನ್ನು ಮಗಳ ತರಹ ನೋಡಿಕೊಳ್ಳುತ್ತೇನೆ ಅಂತಾ ಹೇಳುತ್ತಿದ್ದರು, ಆದರೆ ನನಗೆ ಬೈಯುವುದು, ಹೊಡೆಯುವುದು, ಬಡೆಯುವುದು ಮಾಡುತ್ತಿದ್ದರು. ನಮ್ಮ ನಾದುನಿಯನ್ನು ಅದೇ ಊರಲ್ಲಿ ಮದುವೆ ಮಾಡಿಕೊಟ್ಟಿದ್ದರು, ಅವಳು ನಮ್ಮ ಮನೆಗೆ ಬಂದು ಹೋಗುವುದು ಮಾಡುತ್ತಿದ್ದಳು. ಅವಳೂ ಸಹ ಕಿರುಕುಳ ಕೊಡುತ್ತಿದ್ದಳು.

ನನಗೆ ಆರೋಗ್ಯ ಸರಿ ಇಲ್ಲದಿದ್ದಾಗ ನನಗೆ ತವರುಮನೆಗೆ ಕಳುಹಿಸಿದ್ದರು. ನಂತರ ನನ್ನ ತವರುಮನೆಯವರು ನನ್ನನ್ನು ಬಳ್ಳಾರಿಯ ಆದರ್ಶ ಆಸ್ಪತ್ರೆಗೆ ಚಿಕಿತ್ಸೆಗೆ ಅಂತಾ ಸೇರಿಸಿದ್ದರು. ಆಗಲೂ ಸಹ ಆರೋಪಿತರು ನನ್ನನ್ನು ನೋಡಲು ಬರಲಿಲ್ಲ. ಫೋನ್ ಮಾಡಿ ತಿಳಿಸಿದರೂ ಸಹ ಯಾರೂ ಬರಲಿಲ್ಲ.

ಸಿ.ಸಿ. ಸಂಖ್ಯೆ: **715/2021**

CW-1 PW- 1

ದಿ: 18/12/2019 ರಂದು ರಾತ್ರಿ 8.30ಕ್ಕೆ ನಾನು ನನ್ನ ತವರುಮನೆಯಲ್ಲಿದ್ದಾಗ ಆರೋಪಿತರು ಮತ್ತು ಅವರ ಜೊತೆ 3-4 ಜನ ಬಂದರು. ನಾನು ಕುಳಿತುಕೊಂಡಿದ್ದೆ, ಆಗ 1 ನೇ ಆರೋಪಿ ನನ್ನ ಗಂಡ ನನ್ನನ್ನು ಕೂದಲು ಹಿಡಿದು ಮನೆಯ ಒಳಗಿನಿಂದ ಹೊರಗಡೆ ಎಳೆದುಕೊಂಡು ಬಂದು ಕಪಾಳಕ್ಕೆ ಹೊಡೆದರು. ನಂತರ ನನ್ನ ಅತ್ತೆ ಸಹ ನನಗೆ ಕಪಾಳಕ್ಕೆ ಹೊಡೆದರು. ನನ್ನ ಮಾವ ಬಟ್ಟೆ ಹಿಡಿದು ಎಳೆದಾಡಿದರು. ಆಗ ಚಾ.ಸಾ. 4 ರಿಂದ 8 ರವರು ಬಂದು ಜಗಳ ಬಿಡಿಸಿರುತ್ತಾರೆ. ಆಗ ಆರೋಪಿತರು ನಿನಗೆ ದುಡ್ಡು ತೆಗೆದುಕೊಂಡು ಬಾ ಅಂತಾ ಹೇಳಿ ಕಳುಹಿಸಿದರೆ ನೀನು ಇಲ್ಲಿ ಬಂದು ಕುಳಿತಿದಿಯಾ ಅಂತಾ ಬೈದರು. 5 ಲಕ್ಷ ಹಣ ತರುವಂತೆ ಹೇಳಿದ್ದರು. ನಂತರ ನಾನು ಠಾಣೆಗೆ ಹೋಗಿ ದೂರು ನೀಡಿರುತ್ತೇನೆ.

ದಿ: 19/12/2019 ರಂದು ನಾನು ಪೋಲೀಸರಿಗೆ ದೂರು ಕೊಟ್ಟಿದ್ದು, ಆದರೆ ಆರೋಪಿತರು ರಾಜೀ ಆಗುತ್ತೇವೆ ಅಂತಾ ಹೇಳಿ ಮುಚ್ಚಳಿಕೆ ಪತ್ರ ಬರೆದುಕೊಟ್ಟಿರುತ್ತಾರೆ.

ನಂತರ ಆರೋಪಿತರು ದಿ: 01/01/2020 ರಂದು ಸಿಂಧನೂರಿಗೆ ಬಂದು ನನ್ನನ್ನು ಮಾನ್ವಿಗೆ ಕರೆದುಕೊಂಡು ಹೋಗಿರುತ್ತಾರೆ. ಸ್ವಲ್ಪ ದಿನ ಚೆನ್ನಾಗಿ ನೋಡಿಕೊಂಡು ನಂತರ ಮತ್ತೆ ಮೊದಲು ಹೇಗೆ ಕಿರುಕುಳ ಕೊಡುತ್ತಿದ್ದರೋ ಹಾಗೆಯೇ ಕಿರುಕುಳ ಕೊಡಲು ಪ್ರಾರಂಭಿಸಿದರು.

ದಿ: 19/03/2020 ರಂದು ನಮಗೆ ವರದಕ್ಷಿಣೆ ಬೇಕೇ ಬೇಕು ಅಂತಾ ನನ್ನನ್ನು ಮನೆಯಿಂದ ಹೊರಗಡೆ ಕಳುಹಿಸಿದರು. ಆಗಿನಿಂದ ನಾನು ತವರುಮನೆಯಲ್ಲಿಯೇ ವಾಸಿಸುತ್ತಿದ್ದೇನೆ. ನಂತರ ನಾನು ನ್ಯಾಯ ಬೇಕು ಅಂತಾ ಪೋಲೀಸ್ ಠಾಣೆಗೆ ಹೋಗಿ ದೂರು ಸಲ್ಲಿಸಿದ್ದೇನೆ. ನಾನು ದೂರನ್ನು ನೋಡಿದರೆ ಗುರುತಿಸುತ್ತೇನೆ.

ಈಗ ನಾನು ನೋಡುತ್ತಿರುವ ದಾಖಲೆ ನಾನು ನೀಡಿರುವ ದೂರು ಆಗಿರುತ್ತದೆ. ಅದರ ಮೇಲೆ ನನ್ನ ಸಹಿ ಇದೆ. ಅದನ್ನು ನಿ.ಪಿ. 1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 1(ಎ) ಎಂದು ಗುರುತಿಸಲಾಯಿತು. ದೂರಿನ ಪ್ರತಿ ಪುಟಕ್ಕೆ ನಾನು ಸಹಿ ಮಾಡಿರುತ್ತೇನೆ.

(ಈ ಹಂತದಲ್ಲಿ ಸ.ಸ.ಅ ರವರು ಸದರಿ ಸಾಕ್ಷಿಯ ಹೇಳಿಕೆಯನ್ನು ಕಲಂ. 164(5) ಸಿ.ಆರ್.ಪಿ.ಸಿ.ಯಡಿಯಲ್ಲಿ ದಾಖಲಿಸಿಕೊಂಡಿದ್ದು, ಅದನ್ನು ಪರಿಗಣಿಸುವಂತೆ ಕೋರಿರುತ್ತಾರೆ. ಸದರಿ ಸಾಕ್ಷಿದಾರರ ಸಾಕ್ಷ್ಯದೊಂದಿಗೆ ಅಳವಡಿಸಲಾಯಿತು.)

ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ 1 ನೇ ಆರೋಪಿ ನನ್ನ ಗಂಡ ಇರುತ್ತಾನೆ. 3 ನೇ ಆರೋಪಿ ಗೈರು ಹಾಜರು ಇದ್ದು, ಅವರ ಗುರುತಿಗೆ ಯಾವುದೇ ತಕರಾರು ಇಲ್ಲ ಅಂತಾ ಅವರ ಪರ ವಕೀಲರು ತಿಳಿಸಿರುತ್ತಾರೆ.

ದೂರು ನೀಡಿದ ನಂತರ ಪೋಲೀಸರು ದಿ: 08/10/2020 ರಂದು ಬೆಳಗ್ಗೆ ನಮ್ಮ ಮನೆಗೆ ಬಂದು ನಾನು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಮಾಡಿರುತ್ತಾರೆ.

ಈಗ ನಾನು ನೋಡುತ್ತಿರುವ ದಾಖಲೆ ಸದರಿ ಪಂಚನಾಮೆ ಆಗಿರುತ್ತದೆ. ಅದರ ಮೇಲೆ ನನ್ನ ಸಹಿ ಇರುತ್ತದೆ. ಅದನ್ನು ನಿ.ಪಿ. 2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 2(ಎ) ಎಂದು ಗುರುತಿಸಲಾಯಿತು.

ಈಗ ನಾನು ನೋಡುತ್ತಿರುವ 2 ಫೋಟೋಗಳು ಪಂಚನಾಮೆ ಸಮಯದಲ್ಲಿ ನಾನು ತೋರಿಸಿದ ಸ್ಥಳದಲ್ಲಿ ತೆಗೆದ ಫೋಟೋಗಳಾಗಿರುತ್ತವೆ. ಅವುಗಳನ್ನು ನಿ.ಪಿ. 3 ಮತ್ತು 4 ಎಂದು ಗುರುತಿಸಲಾಯಿತು.

ನಂತರ ನನ್ನನ್ನು ಮಾನ್ವಿಯ ನನ್ನ ಗಂಡನ ಮನೆಗೆ ದಿ: 15/10/2020 ರಂದು ಕರೆದುಕೊಂಡು ಹೋಗಿದ್ದರು. ಅಲ್ಲಿ ನನ್ನನ್ನು ಹೊಡೆಬಡೆ ಮಾಡಿದ್ದಕ್ಕಾಗಿ ಪಂಚನಾಮೆ ಮಾಡಲು ಕರೆದುಕೊಂಡು

ಹೋಗಿದ್ದರು. ನಾನು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಮಾಡಿರುತ್ತಾರೆ. ನಾನು ಅದಕ್ಕೆ ಸಹಿ ಮಾಡಿರುತ್ತೇನೆ. ಈಗ ನಾನು ನೋಡುತ್ತಿರುವ ದಾಖಲೆ ಮೇಲೆ ನನ್ನ ಸಹಿ ಇದೆ. ಅದನ್ನು ನಿ.ಪಿ. 5 ಎಂದು, ಸಾಕ್ಷಿ ಸಹಿಯನ್ನು ನಿ.ಪಿ. 5(ಎ) ಎಂದು ಗುರುತಿಸಲಾಯಿತು.

ಈಗ ನಾನು ನೋಡುತ್ತಿರುವ 4 ಫೋಟೋಗಳು ನನ್ನ ಗಂಡನ ಮನೆಯಲ್ಲಿ ಮಾಡಿದ ಪಂಚನಾಮೆಯ ಫೋಟೋಗಳಾಗಿರುತ್ತವೆ. ಅದರಲ್ಲಿ ನಾನು ಇರುತ್ತೇನೆ. ಸದರಿ 4 ಫೋಟೋಗಳನ್ನು ನಿ.ಪಿ. 6 ರಿಂದ 9 ಎಂದು ಗುರುತಿಸಲಾಯಿತು.

ನಾನು ಈ ಕುರಿತು ಪೋಲೀಸರಿಗೆ ಹೇಳಿಕೆ ನೀಡಿದ್ದೇನೆ. ಆರೋಪಿತರಿಗೆ ಶಿಕ್ಷೆ ವಿಧಿಸಿ ನ್ಯಾಯ ಕೊಡುವಂತೆ ಕೇಳುತ್ತೇನೆ.

ಪಾಟೀ ಸವಾಲು ಃ ಆರೋಪಿತರ ಪರ ಶ್ರೀ. ಯು.ಕೆ.ವೈ. ವಕೀಲರಿಂದ

ನನ್ನ ತವರುಮನೆಯಲ್ಲಿ ನಮ್ಮ ಮನೆಯ ಹಿರಿತನವನ್ನು ನಮ್ಮ ತಂದೆ ಮಾಡುತ್ತಾರೆ. ಸಿಂಧನೂರಿನ ಪಟೇಲ್‌ವಾಡಿಯಲ್ಲಿ ನಮ್ಮದು ಒಳ್ಳೆಯ ದೊಡ್ಡ ಮನೆತನ ಎನ್ನುವುದು ಸರಿ. ನಮ್ಮ ತಂದೆ ತಾಯಿಗೆ ನಾವು 4 ಜನ ಹೆಣ್ಣುಮಕ್ಕಳು ಇರುತ್ತೇವೆ. ನನಗೆ ಇಬ್ಬರು ಸಹೋದರರು ಇರುತ್ತಾರೆ. ನಮ್ಮ ಮನೆಯ ಸುತ್ತಮುತ್ತ ಯಾರ ಯಾರ ಮನೆಗಳು ಬರುತ್ತವೆ ಹೇಳಲು ಬರುತ್ತವೆ. ನಮ್ಮ ಮನೆಯ ಎದುರಿಗೆ ಬಂಗಾರಶೆಟ್ಟಿ ಶೇಖರಪ್ಪ ಇವರ ಮನೆ ಇರುತ್ತದೆ. ನಮ್ಮ ಮನೆಯ ಬಾಜು ಬಲಗಡೆ ವೀರಭದ್ರಪ್ಪ ಇವರ ಮನೆ ಇರುತ್ತದೆ. ಎಡಗಡೆ ತೊಂತನಾಳ ಶರಣಪ್ಪ ಇವರ ಮನೆ ಇರುತ್ತದೆ. ನಮ್ಮ ಮನೆಯ ಹಿಂದುಗಡೆ ಗಡಿಗೇರ್ ಓಣಿ ಇರುತ್ತದೆ. ನಮ್ಮ ಮನೆಯ ಸುತ್ತಮುತ್ತ 15-20 ಮನೆಗಳು ಇರುತ್ತವೆ ಎಂದರೆ ಸರಿ. ನಮ್ಮ ಮನೆಯ ಸುತ್ತ ಮುತ್ತ ನಮ್ಮ ಜಾತಿಯವರು ಹೊರತುಪಡಿಸಿ ಬೇರೆ ಜಾತಿಯವರು ಸಹ ಇರುತ್ತಾರೆ. ನಮ್ಮ ಮನೆ ಮುಖ್ಯ ರಸ್ತೆಯಿಂದ ಸ್ವಲ್ಪ

ಒಳಗಡೆ ಇರುತ್ತದೆ. ಮಸೀದಿ ಬಿಟ್ಟು 2 ಮನೆಯ ನಂತರ ನಮ್ಮ ಮನೆ ಇರುತ್ತದೆ. ನಮ್ಮ ಮನೆಯ ಹತ್ತಿರ ಯಾವಾಗಲೂ ಜನಸಂದಣಿ ಇರುತ್ತದೆ ಎಂದರೆ ಸರಿಯಲ್ಲ. ತೊಂತನಾಳ ಪಟೇಲ್‌ವಾಡಿಯಲ್ಲಿಯೇ ಶ್ರೀಮಂತರು ಎನ್ನುವುದು ನನಗೆ ಗೊತ್ತಿಲ್ಲ.

ಮಾನ್ವಿಯಲ್ಲಿ ನನ್ನ ಗಂಡನ ಮನೆಯ ಸುತ್ತಮುತ್ತ ಯಾರ ಮನೆಗಳು ಇರುತ್ತವೆ ಗೊತ್ತಿಲ್ಲ. ನನ್ನನ್ನು ಮನೆಯಿಂದ ಹೊರಗಡೆ ಬಿಟ್ಟಿಲ್ಲ, ಆದ್ದರಿಂದ ಅಲ್ಲಿ ಯಾರ ಯಾರ ಮನೆಗಳು ಇವೆ ಗೊತ್ತಿಲ್ಲ. ಬಸ್ ನಿಲ್ದಾಣದಿಂದ ನನ್ನ ಗಂಡನ ಮನೆ ಎಷ್ಟು ದೂರ ಆಗುತ್ತದೆ ಗೊತ್ತಿಲ್ಲ. ನನ್ನ ಗಂಡನ ಮನೆ ಯಾರ ಹೆಸರಿನಲ್ಲಿ ಇರುತ್ತದೆ ಗೊತ್ತಿಲ್ಲ. ನನ್ನ ಮಾವನಿಗೆ ಅಂದರೆ ನನ್ನ ಗಂಡನ ತಂದೆಗೆ 3 ಜನ ಸಹೋದರರು ಇರುತ್ತಾರೆ. ಅವರೆಲ್ಲರೂ ಅದೇ ಊರಲ್ಲಿ ಇರುವುದಿಲ್ಲ, ಬೇರೆ ಬೇರೆ ಊರಲ್ಲಿ ಇರುತ್ತಾರೆ. ನಾನು ಮದುವೆಯಾದ ದಿನವೇ ನನ್ನ ಗಂಡನ ಮನೆಗೆ ಹೋಗಿರುತ್ತೇನೆ. ನನ್ನ ತವರುಮನೆಯವರು ನಮ್ಮ ಮದುವೆಯಾದ ನಂತರ ಆರತಕ್ಷತೆ ಮಾಡಿರುತ್ತಾರೆ. ಮದುವೆಯಾದ ನಂತರ 9 ನೇ ದಿನಕ್ಕೆ ಆರತಕ್ಷತೆ ಮಾಡಿರುತ್ತಾರೆ. ಆರತಕ್ಷತೆ ಮುಗಿಸಿ ಉಡಿಅಕ್ಕಿ ಹಾಕಿಸಿಕೊಂಡು ಮತ್ತೇ ನನ್ನ ಗಂಡನ ಮನೆಗೆ ಹೋಗಿರುತ್ತೇನೆ. 3 ಬಾರಿ ಉಡಿಅಕ್ಕಿ ಹಾಕುವ ಕಾರ್ಯಕ್ರಮ ಮಾಡುತ್ತಾರೆ, ಆ ಸಮಯದಲ್ಲಿ ಮಾತ್ರ ತವರುಮನೆಗೆ ಬಂದಿರುತ್ತೇನೆ, ಉಳಿದ ದಿನ ನನ್ನ ಗಂಡನ ಮನೆಯಲ್ಲಿಯೇ ವಾಸಿಸುತ್ತಿದ್ದೆ. ಯಾವ ಯಾವ ದಿನಾಂಕದಂದು ಉಡಿಅಕ್ಕಿ ಹಾಕಿರುತ್ತಾರೆ ಅಂತಾ ಹೇಳಲು ಬರುವುದಿಲ್ಲ. 1 ನೇ ಆರೋಪಿ ಹೂ ಮಾರಾಟ ಮಾಡುತ್ತಾನೆ ಎನ್ನುವುದು ಸರಿ. ಆರೋಪಿತರೆಲ್ಲರೂ ಮಾನ್ವಿ ಬಸ್ ನಿಲ್ದಾಣದ ಎದುರಿಗೆ ಹೂವಿನ ಅಂಗಡಿ ಇಟ್ಟುಕೊಂಡು ಹೂ ವ್ಯಾಪಾರ ಮಾಡಿ ಜೀವನ ಮಾಡುತ್ತಾರೆ ಎನ್ನುವುದು ಸರಿ. 3 ನೇ ಆರೋಪಿ ಮನೆಯಲ್ಲಿಯೇ ಇರುತ್ತಾಳೆ ಎನ್ನುವುದು ಸರಿ. ನನ್ನ ನಾದುನಿ ಲಿಂಗಸುಗೂರಿನಲ್ಲಿಯೇ ಇರುತ್ತಾಳೆ ಎಂದರೆ ಮೊದಲು ಮಾನ್ವಿಯಲ್ಲಿ ಇರುತ್ತಿದ್ದಳು. ಸಾಮಾನ್ಯವಾಗಿ ಮದುವೆಯಾದಾಗ ಹೆಣ್ಣುಮಕ್ಕಳ ಮನೆಯವರು ಮನೆಬಳಕೆ ಸಾಮಾನುಗಳನ್ನು ಕೊಡುತ್ತಾರೆ ಎನ್ನುವುದು ಸರಿ. ಆದರೆ ಎಲ್ಲಾ ಸಾಮಾನುಗಳ ಮೇಲೆ ಹೆಸರು ಬರೆಸುವುದಿಲ್ಲ, ಬೆಳ್ಳಿ ಸಾಮಾನುಗಳ ಮೇಲೆ ಹೆಸರು ಬರೆಸಿರುತ್ತಾರೆ. ಬೆಳ್ಳಿ ಸಾಮಾನುಗಳನ್ನು

ಖರೀದಿಸಿದಾಗ ಬಿಲ್‌ಗಳನ್ನು ಕೊಡುತ್ತಾರೆ ಎಂದರೆ ಸರಿ. ಸದರಿ ರಶೀದಿಗಳನ್ನು ಪೋಲೀಸರಿಗೆ ಕೊಟ್ಟಿದ್ದೇನೆ. ನಾನು ಸದರಿ ಮನೆಬಳಕೆ ಸಾಮಾನುಗಳನ್ನು ಆರೋಪಿಯಿಂದ ಪಡೆದುಕೊಂಡಿಲ್ಲ. ನಾವು ಯಾವುದೇ ಮನೆಬಳಕೆ ಸಾಮಾನುಗಳನ್ನು ಆರೋಪಿತರಿಗೆ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ಮದುವೆ ದಿನಾಂಕದಿಂದ ಒಂದು ತಿಂಗಳವರೆಗೆ ಚೆನ್ನಾಗಿ ನೋಡಿಕೊಂಡಿರುತ್ತಾರೆ, ನಿಖರವಾಗಿ ಇದೇ ದಿನಾಂಕದವರೆಗೆ ಚೆನ್ನಾಗಿ ನೋಡಿಕೊಂಡಿರುತ್ತಾರೆ ಅಂತಾ ಹೇಳಲು ಬರುವುದಿಲ್ಲ. ನಮ್ಮ ತವರುಮನೆಯವರು 2 ಸಲ ಪಂಚಾಯತಿ ಮಾಡಿರುತ್ತಾರೆ. ಯಾವ ಯಾವ ದಿನಾಂಕದಂದು ಪಂಚಾಯತಿ ಮಾಡಿರುತ್ತಾರೆ ದಿನಾಂಕ ನೆನಪಿಲ್ಲ. ನಾನು ಮಾನ್ವಿ ಪೋಲೀಸ್ ಠಾಣೆಯಲ್ಲಿ ದೂರು ಕೊಟ್ಟಿಲ್ಲ. ನಾನು ಗಂಡನಮನೆಯಿಂದ ತವರುಮನೆಗೆ ಬಂದು ನಂತರ ಬಳ್ಳಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಅಂತಾ ದಾಖಲಾಗಿದ್ದೆ. ನನ್ನ ತವರುಮನೆಯವರು ನನ್ನನ್ನು ಗಂಡನಮನೆಯಿಂದ ಕರೆದುಕೊಂಡು ಬಂದಿಲ್ಲ. ನನ್ನ ಗಂಡನ ಮನೆಯವರೇ ನನಗೆ ಆರೋಗ್ಯ ಸರಿ ಇಲ್ಲ ಅಂತಾ ನನ್ನನ್ನು ಕರೆದುಕೊಂಡು ಬಂದು ತವರುಮನೆಗೆ ಬಿಟ್ಟಿರುತ್ತಾರೆ. ನನ್ನನ್ನು ಆರೋಪಿತರು ತವರುಮನೆಯಲ್ಲಿ ತಂದು ಬಿಡುವಾಗ ನಮ್ಮ ಮಧ್ಯೆ ಸಂಬಂಧ ಚೆನ್ನಾಗಿತ್ತು ಎಂದರೆ ಸರಿಯಲ್ಲ. ನನ್ನ ಮಾವ ತೀರಿಕೊಂಡಾಗ ನಾವು ಹೋಗಿಲ್ಲ, ಏಕೆಂದರೆ ನಮಗೆ ವಿಷಯ ತಿಳಿಸಿರಲಿಲ್ಲ. ವಿಷಯ ತಿಳಿದ ನಂತರ ಸಹ ನಾವು ಅವರ ಮನೆಗೆ ಹೋಗಿಲ್ಲ. ದಿ: 18/12/2019 ರಂದು ಘಟನೆಯಾದ ನಂತರ ದಿ: 19/12/2019 ರಂದು ದೂರು ನೀಡಲು ಠಾಣೆಗೆ ಹೋಗಿದ್ದೆ. ನಾನು ಗಂಡನಮನೆಯಿಂದ ತವರುಮನೆಗೆ ಬಂದ ನಂತರ ಎಷ್ಟು ದಿನಗಳ ನಂತರ ದೂರು ಕೊಡಲು ಹೋಗಿದ್ದೀರಿ ಎಂದರೆ ದಿನಗಳ ಲೆಕ್ಕ ಇಟ್ಟಿಲ್ಲ. ಎಷ್ಟು ತಿಂಗಳಿನ ನಂತರ ಹೋಗಿದ್ದೀರಿ ಎಂದರೆ ನೆನಪಿಲ್ಲ. ದೂರು ನೀಡುವ ಪೂರ್ವದಲ್ಲಿ 8 ರಿಂದ 10 ತಿಂಗಳು ನನ್ನ ತವರುಮನೆಯಲ್ಲಿಯೇ ಇದ್ದೆ ಎಂದರೆ ನನಗೆ ನೆನಪಿಲ್ಲ.

ದಿ: 18/12/2019 ರಂದು ರಾತ್ರಿ 8.30 ಕ್ಕೆ ಆರೋಪಿತರು ಬಂದಿದ್ದರು. ಅತ್ತೆ, ಮಾವ, ಗಂಡ ಅವರ ಜೊತೆ 3-4 ಜನ ಬಂದಿದ್ದರು. ಅವರ ಜೊತೆ ಬಂದವರು ಯಾರು ಅಂತಾ ನನಗೆ ಗೊತ್ತಿಲ್ಲ ಮತ್ತು ಅವರ ಹೆಸರು ಗೊತ್ತಿಲ್ಲ. ನಾನು ಪೋಲೀಸರ ಮುಂದೆ ಆರೋಪಿತರ ಜೊತೆ 3-4

ಸಿ.ಸಿ. ಸಂಖ್ಯೆಃ 715/2021

CW-1 PW- 1

ಜನ ಬಂದಿದ್ದರು ಅಂತಾ ಹೇಳಿದ್ದೇನೆ. ಆರೋಪಿತರು ಯಾವ ವಾಹನದಲ್ಲಿ ಬಂದಿದ್ದರು ಅಂತಾ ನಾನು ನೋಡಿಲ್ಲ. ನಮ್ಮ ಮನೆಯ ಸುತ್ತಮುತ್ತ ಬೀದಿ ದೀಪಗಳು ಇರುತ್ತವೆ ಎಂದರೆ ಸರಿ. ಯಾರು ಬಂದರು ಯಾರು ಹೋದರು ಗೊತ್ತಾಗುತ್ತದೆ ಎಂದರೆ ಸರಿ. ನಮ್ಮ ಮನೆಯ ಬೀದಿಯಲ್ಲಿ ಸಿ.ಸಿ. ಕ್ಯಾಮರಾಗಳು ಇರುತ್ತವೆ ಎಂದರೆ ಸರಿಯಲ್ಲ. ನಾನು ದಿ: 19/12/2019 ರಂದು ದೂರನ್ನು ಪೋಲೀಸರಿಗೆ ಕೊಟ್ಟಿದ್ದೇನೆ. ಅದಾದ ನಂತರ ಪೋಲೀಸ್ ಠಾಣೆಯಲ್ಲಿ ಆರೋಪಿತರು ಬರೆದುಕೊಟ್ಟ ಮುಚ್ಚಳಿಕೆ ಪತ್ರ ನಮ್ಮ ಹತ್ತಿರ ಇರುವುದಿಲ್ಲ. ಸಾಕ್ಷಿ ಮುಂದುವರೆದು ಅದು ಯಾರ ಹತ್ತಿರ ಇರುತ್ತದೆ ನೆನಪಿಲ್ಲ ಅಂತಾ ಸ್ವತಃ ನುಡಿಯುತ್ತಾರೆ. ನಾನು ಎರಡು ಸಲ ದೂರು ನೀಡಿರುತ್ತೇನೆ. ನಾನು ಎರಡು ಸಲ ದೂರು ನೀಡಲು ನನ್ನ ತಂದೆಯ ಜೊತೆಗೆ ಹೋಗಿದ್ದೆ. ಮೊದಲ ದಿ: 19/12/2019 ರಂದು ನಂತರ ದಿ: 06/10/2020 ರಂದು ಆ ದಿನ ದೂರು ತೆಗೆದುಕೊಳ್ಳಲಿಲ್ಲ, ನಂತರ ಮರುದಿನ ದಿ: 07/10/2020 ರಂದು ದೂರು ಕೊಡಲು ಠಾಣೆಗೆ ಹೋಗಿದ್ದೆ. ದಿ: 18/12/2019 ರಂದು ಆದ ಘಟನೆಗೆ ದಿ: 07/10/2020 ರಂದು ದೂರು ಕೊಟ್ಟಿದ್ದೇನೆ ಎಂದರೆ ಸರಿ. ಚಾ.ಸಾ. 7,8 ಮತ್ತು 9 ನನ್ನ ಅಣ್ಣನ ಗೆಳೆಯರು ಎಂದರೆ ಸರಿ. ಚಾ.ಸಾ. 10 ರಿಂದ 16 ರವರು ನಮ್ಮ ಮನೆಯ ಆಜು ಬಾಜುದವರು. ಚಾ.ಸಾ. 12,14,16 ರವರೂ ಸಹ ನನ್ನ ಅಣ್ಣನ ಗೆಳೆಯರು ಎಂದರೆ ಸರಿ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ, ರೂ. 200.00 ಖರ್ಚಿನೊಂದಿಗೆ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ.)

ಓ ಹೇ ಕೇ ಸರಿ ಇದೆ,

ಪ್ರಧಾನ ಸಿವಿಲ್ ನ್ಯಾಯಾಧೀಶರು. ಸಿಂಧನೂರು.